## ದೈಹಿಕ ಶಿಕ್ಷಣದ ವಾರ್ಷಿಕ ಶಾಲಾ ಕ್ರಿಯಾ ಯೋಜನೆ-2024-25

| ತಿಂಗಳು | ಕ್ರಿಯಾಯೋಜನೆ ವಿಷಯಗಳು |
|---|---|
| ಜೂನ್ | 1. ಶಾಲಾ ಸಮವಸ್ತ್ರ, ಶಿಸ್ತು, ಸ್ವಚ್ಚತೆ, ಸಮಯಪಾಲನೆ ಮೊದಲಾದವುಗಳ ಬಗ್ಗೆ ಮಾಹಿತಿಯನ್ನು ನೀಡುವುದು.<br>2. ಶಾಲಾ ಕ್ರೀಡಾ ಮೈದಾನವನ್ನು ಸಜ್ಜುಗೊಳಿಸುವುದು ಮತ್ತು ಕ್ರೀಡಾ ಅಂಕಣಗಳನ್ನು ರಚಿಸಿಕೊಳ್ಳುವುದು.<br>3. ರಾಷ್ಟ್ರಗೀತೆ ಮತ್ತು ನಾಡಗೀತೆಗಳನ್ನು ನಿಯಮಿತವಾಗಿ ವಿದ್ಯಾರ್ಥಿಗಳಿಗೆ ಅಭ್ಯಾಸ ಮಾಡಿಸುವುದು..<br>4. ಮೊದಲನೇ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ವೇಗ, ಬಲ, ಕಷ್ಟಸಹಿಷ್ಣತೆ ಸಾಮರ್ಥ್ಯಗಳನ್ನು ನಮೂನೆ-1 ರ ವಹಿಯಲ್ಲಿ ನಮೂದಿಸುವು.<br>5. ಶಾಲಾ ಹಂತದಲ್ಲಿ ಇಲಾಖೆ ಸಂಘಟಿಸುವ ಕ್ರೀಡಾ ಸ್ಪರ್ಧೆಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೂ ಏರ್ಪಡಿಸಿ ಕ್ರೀಡಾ ತಂಡಗಳನ್ನು ಆಯ್ಕೆ ಮಾಡಿಕೊಳ್ಳುವುದು. ಕ್ಲಸ್ಟರ್ ಮಟ್ಟದಲ್ಲಿ ಭಾಗವಹಿಸುವ ಪಂದ್ಯಾಟ ಮತ್ತು ಮೇಲಾಟ ಕ್ರೀಡಾ ತಂಡಗಳಿಗೆ ಪೂರ್ವಭಾವಿ ತರಬೇತಿ ನೀಡುವುದು.<br>6. ಕ್ರೀಡಾ ಸಂಘದರಚನೆ. |
| ಜುಲೈ | 7. ಕ್ರೀಡಾ ಆಯವ್ಯಯ ಪಟ್ಟಿ ತಯಾರಿಸಿ, ಕ್ರೀಡಾ ಸಮಿತಿಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆಯುವುದು.<br>8. ವಲಯ ಮಟ್ಟದಲ್ಲಿ ಭಾಗವಹಿಸುವ ಕ್ರೀಡಾಪಟುಗಳ ಪ್ರವೇಶ ಪತ್ರಗಳನ್ನು ಸಿದ್ದಪಡಿಸಿಕೊಳ್ಳುವುದು ಮತ್ತು ಪೋಷಕರ ಗಮನಕ್ಕೆ ತಂದು ಪ್ರವೇಶಪತ್ರದ ಹಿಂಭಾಗದಲ್ಲಿರುವ ಮಾಹಿತಿಯನ್ನುತುಂಬುವುದು.<br>9.ಮೊದಲನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ-02ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |
| ಆಗಸ್ಟ್ | 10. ತಾಲ್ಲೂಕು ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ.<br>11. ಸ್ವಾತಂತ್ರ್ಯ ದಿನಾಚರಣೆ ಪೂರ್ವ ಸಿದ್ಧತೆ ಮತ್ತು ಆಚರಿಸುವುದು<br>12. ರಾಷ್ಟ್ರೀಯ ಕ್ರೀಡಾ ದಿನಾಚರಣೆ ಅಂಗವಾಗಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವುದು.<br>13. ಸುವರ್ಣ ಆರೋಗ್ಯ ಚೈತನ್ಯ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಥಿಗಳ ಆರೋಗ್ಯ ತಪಾಣೆ ನಡೆಸಿ, ಆರೋಗ್ಯ ವಹಿಯಲ್ಲಿ ನಮೂದಿಸುವುದು.<br>14. ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವುದು.<br>15. ರಾಷ್ಟ್ರೀಯ ಕ್ರೀಡಾ ದಿನಾಚರಣೆ(ದ್ಯಾನ್‌ಚಂದ್‌ಜನ್ಮ ದಿನಾಚರಣೆ) ಆಗಸ್ಟ್ 29 ರಂದು ಆಚರಿಸುವುದು. |
| ಸೆಪ್ಟಂಬರ್ | 16. ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆ ಪ್ರಯುಕ್ತ ಕ್ರೀಡಾ ಸಂಘದಡಿಯಲ್ಲಿ ವಿವಿಧ ಕ್ರೀಡಾ ಸ್ಪರ್ಧೆಗಳನ್ನು ಏರ್ಪಡಿಸುವುದು.<br>17. ಎರಡನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ-2ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು.<br>18. ಮೊದಲನೇ ಸಂಕಲನಾತ್ಮಕ ಪರೀಕ್ಷೆ ನಡೆಸಲು ನೀಲನಕ್ಷೆ ರಚನೆ ಅದರ ಪ್ರಕಾರ ಪ್ರಶ್ನೆ ಪತ್ರಿಕೆ ರಚಿಸುವುದು ಮತ್ತು ಉತ್ತರ ಪತ್ರಿಕೆ ಸಿದ್ದಪಡಿಸಿಕೊಳ್ಳುವುದು. (ಪ್ರ.ಸಂ.)<br>19. ಮೊದಲನೇ ಸಂಕಲನಾತ್ಮಕ ಪರೀಕ್ಷೆ(ಲಿಖಿತ) ನಡೆಸಿ ಮೌಲ್ಯಮಾಪನದ ನಂತರ ತಾತ್ವಿಕ ಕಲಿಕಾ ಸಾಮರ್ಥ್ಯಗಳನ್ನು ನಮೂನೆ-3ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು. |

2024-25

| | |
|---|---|
| ಅಕ್ಟೋಬರ್ | 20. ಮಹಾತ್ಮಗಾಂಧಿ ಜಯಂತಿ ಆಚರಣೆ.<br>21. ಆರೋಗ್ಯ ಸಂಘದ ಅಡಿಯಲ್ಲಿ ಆರೋಗ್ಯ ಕಾರ್ಯಕ್ರಮವನ್ನು ಹಮ್ಮಿಕೊಳ್ಳುವುದು.<br>22. ಕ್ರೀಡಾ ಸಲಕರಣೆಗಳ ಖರೀದಿ.<br>23. ಕನ್ನಡ ರಾಜ್ಯೋತ್ಸವ ಆಚರಣೆ ಸಿದ್ಧತೆ.<br>24. ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ. |
| ನವೆಂಬರ್ | 25. ಕನ್ನಡ ರಾಜ್ಯೋತ್ಸವಆಚರಣೆ.<br>26. ಮಕ್ಕಳ ದಿನಾಚರಣೆ ಅಚರಿಸುವುದು.<br>27. ವಿಭಾಗ ಮಟ್ಟದ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ.<br>28. ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಭಾಗವಹಿಸುವಿಕೆ. |
| ಡಿಸೆಂಬರ್ | 29. ಮೂರನೇ ರೂಪಣಾತ್ಮಕ ಪರೀಕ್ಷೆ(ಪ್ರಾಯೋಗಿಕ) ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ-2ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು.<br>30. ಶಾಲಾ ವಾರ್ಷಿಕ ಕ್ರೀಡಾಕೂಟ ಸಂಘಟಿಸುವುದು.<br>31. ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಪ್ರೋತ್ಸಾಹ.<br>32. ಕ್ರೀಡಾ ಸಂಘದ ಅಡಿಯಲ್ಲಿ ಕ್ರೀಡಾ ಸಲಕರಣೆಗಳ ವಸ್ತು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳುವುದು.<br>33. ಅನುಪಯುಕ್ತ ಕ್ರೀಡಾ ಸಲಕರಣೆಗಳನ್ನು ಪಟ್ಟಿ ಮಾಡಿ ಹರಾಜಿನ ಅನುಮೋದನೆ ಪ್ರಕ್ರಿಯಗಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಥವಾ ಉಪನಿರ್ದೇಶಕರ ಕಛೇರಿಗೆ ಸಲ್ಲಿಸುವುದು. |
| ಜನವರಿ | 34. ಸ್ವಾಮಿ ವಿವೇಕಾನಂದರ ದಿನಾಚರಣೆ<br>35. ಸುಭಾಸ್‌ಚಂದ್ರಭೋಸರ ಜನ್ಮ ದಿನಾಚರಣೆ ಆಚರಿಸುವುದು.<br>36. ಗಣರಾಜ್ಯೋತ್ಸವದ ಪೂರ್ವ ಸಿದ್ಧತೆ ಹಾಗೂ ಆಚರಣೆ<br>37. ಎರಡನೇ ದೈಹಿಕ ಸಾಮರ್ಥ್ಯ ಪರೀಕ್ಷೆಯನ್ನು ನಡೆಸಿ ವೇಗ,ಬಲ,ಕಷ್ಟಸಹಿಷ್ಣತೆ,ಸಾಮರ್ಥ್ಯಗಳನ್ನು ನಮೂನೆ-1ರ ವಹಿಯಲ್ಲಿ ನಮೂದಿಸುವುದು. |
| ಫೆಬ್ರವರಿ | 38. ನಾಲ್ಕನೇ ರೂಪಣಾತ್ಮಕ(ಪ್ರಾಯೋಗಿಕ) ಪರೀಕ್ಷೆ ನಡೆಸಿ ಕೌಶಲ್ಯದ ಸಾಮರ್ಥ್ಯಗಳನ್ನು ನಮೂನೆ-02ರ ವಹಿಯಲ್ಲಿ ನಮೂದಿಸುವುದು. |
| ಮಾರ್ಚ್ | 39. ಎರಡನೇ ಸಂಕಲನಾತ್ಮಕ ಪರೀಕ್ಷೆಗೆ ನೀಲನಕ್ಷೆ ಪ್ರಕಾರ ಪ್ರಶ್ನೆ ಪತ್ರಿಕೆರಚಿಸುವುದು(ದ್ವಿತೀಯ ಸೆಮಿಸ್ಟರ್)<br>40. ಎರಡನೇ ಸಂಕಲನಾತ್ಮಕ ಪರೀಕ್ಷೆ ನಡೆಸಿ ಮೌಲ್ಯಮಾಪನ ನಂತರತಾತ್ವಿಕ ಕಲಿಕಾ ಸಾಮರ್ಥ್ಯಗಳನ್ನು ನಮೂನೆ-3ರ ವಹಿಯಲ್ಲಿ ನಮೂದಿಸಿ ಶ್ರೇಣಿ ನೀಡುವುದು.<br>41. ಕ್ರೀಡಾ ಸಲಕರಣೆಗಳನ್ನು ಉಪಯುಕ್ತ ಹಾಗೂ ಅನುಪಯುಕ್ತ ಸಲಕರಣೆಗಳನ್ನು ಪಟ್ಟಿಮಾಡಿ ಮಾರ್ಚ್ 31ರೊಳಗೆ ಕ್ರೀಡಾ ದಾಸ್ತಾನು ಪರಿಶೀಲನೆ ಪ್ರಮಾಣ ಪತ್ರವನ್ನು ದೃಡೀಕರಿಸಿಕೊಳ್ಳುವುದು. |
| ಏಪ್ರಿಲ್ | 42. ವಿದ್ಯಾರ್ಥಿಯಎರಡು ಸೆಮಿಸ್ಟರ್‌ಗಳ ಶೈಕ್ಷಣಿಕ ಸಾಧನೆಯನ್ನು ನಮೂನೆ-03ರ ವಹಿಯಲ್ಲಿ ನಮೂದಿಸುವುದು.<br>43. ಎಸ್.ಎಸ್.ಎಲ್.ಸಿ. ಪರೀಕ್ಷೆ ನಡೆಸುವುದು.<br>44. ಫಲಿತಾಂಶ ಘೋಷಣೆ.<br>45. ಅಂಬೇಡ್ಕರ್ ದಿನಾಚರಣೆಯೊಂದಿಗೆ ಶೈಕ್ಷಣಿಕ ಚಟುವಟಿಕೆ ಮುಕ್ತಾಯ |

ದೈಹಿಕ ಶಿಕ್ಷಣ ಶಿಕ್ಷಕರ ಸಹಿ

ಮುಖ್ಯ ಶಿಕ್ಷಕರ ಸಹಿ